ಸಲ್ಲಿಸುವ ಷರತ್ತನ್ನು ವಿಧಿಸಿತ್ತು. ಈ ಕಾಮಗಾರಿಗೆ ಜಿಲ್ಲಾ ಪಂಚಾಯಿತಿಯು ರೂ.೧೦.೦೦ ಲಕ್ಷಗಳನ್ನು ಬಿಡುಗಡೆ ಮಾಡಿತ್ತಾದರೂ ಉಳಿದ ಹಣವನ್ನು ನಿಗಧಿತ ಅವಧಿಯಲ್ಲಿ ಸಂಗ್ರಹಿಸಿ ವೆಚ್ಚ ಮಾಡಲಾಗದಿದ್ದ ಕಾರಣ ಕೇಂದ್ರ ಸರ್ಕಾರವು ನೀಡಿದ್ದ ಒಪ್ಪಿಗೆಯನ್ನು ರದ್ದುಗೊಳಿಸಿದೆ.

ಊ) ಈ ಕ್ರೀಡಾಂಗಣ ನಿರ್ಮಾಣಕ್ಕಾಗಿ ಸಂಸದರ ನಿಧಿಯಿಂದ, ಸಾರ್ವಜನಿಕ ವಂತಿಕೆ ಮೂಲಗಳಿಂದ ಹಾಗೂ ಜಿಲ್ಲಾ ಪಂಚಾಯಿತಿಯಿಂದ ಹೆಚ್ಚುವರಿ ಅನುದಾನ ಪಡೆದು ನಿರ್ಮಾಣ ಕಾರ್ಯ ಕೈಗೊಳ್ಳಲು ಹಾಗೂ ಕೇಂದ್ರ ಸರ್ಕಾರಕ್ಕೆ ವಸ್ತುಸ್ಥಿತಿಯನ್ನು ವಿವರಿಸಿ ಪರಿಷ್ಕೃತ ಎಸ್‌ಆರ್ ದರದ ಪ್ರಕಾರ ಸೂಕ್ತ ಪ್ರಸ್ತಾವವನ್ನು ಸಲ್ಲಿಸುವಂತೆ ತಾಲ್ಲೂಕು ಕ್ರೀಡಾಂಗಣ ಸಮಿತಿಗೆ ಸೂಚಿಸಲು ಆಯುಕ್ತರಿಗೆ ಸೂಚಿಸಲಾಗುವುದು.

ತುರುವೇಕೆರೆ ತಾಲ್ಲೂಕು ದೊಂಬರನ ಹಳ್ಳಿಯಲ್ಲಿ ಪಶುವೈದ್ಯ ಶಾಲೆ ಪ್ರಾರಂಭ.

580(633)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ.(ಅಣ್ಣಯ್ಯ) (ತುರುವೇಕೆರೆ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ತುರುವೇಕೆರೆ ತಾಲ್ಲೂಕು ದೊಂಬರನ ಹಳ್ಳಿಯಲ್ಲಿ ಹಾಗೂ ಸುತ್ತು ಮುತ್ತಲ ಗ್ರಾಮಗಳಿಗೆ ಅನುಕೂಲವಾಗಲು ಪಶು ವೈದ್ಯ ಶಾಲೆ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಈ ವರ್ಷದ ಯೋಜನೆಗಳಲ್ಲಿ ಸೇರಿಸಲಾಗುವುದೇ?

3) ತುರುವೇಕೆರೆ ಕ್ಷೇತ್ರಕ್ಕೆ ಮಂಜೂರಾಗಿರುವ ಪಶುವೈದ್ಯ ಶಾಲೆಗಳು ಎಷ್ಟು? ಅವು ಯಾವುವು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

1) ಇಲ್ಲಾ.

2) ಅನ್ವಯಿಸುವುದಿಲ್ಲ

3) 20

ಪಶು ಆಸ್ಪತ್ರೆಗಳು: 2

1) ತುರುವೇಕೆರೆ

2) ಮಾಯಸಂದ್ರ

ಪಶು ಚಿಕಿತ್ಸಾಲಯಗಳು - 3

1) ದಂಡಿನಶಿವರ

2) ಬಾಣಸಂದ್ರ

3) ತಂಡಗ

ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು

1) ಸಂಪಿಗೆ

2) ಕಲ್ಕರೆ

3) ಮಾಚೇನಹಳ್ಳಿ

4) ಚಾಕುವಳ್ಳಿಪಾಳ್ಯ

5) ಲೋಕಮ್ಮನ ಹಳ್ಳಿ

6) ದಬ್ಬೇಘಟ್ಟ

7) ಅನೇಕೆರೆ

8) ಕುಣಿಕೇನಹಳ್ಳಿ

9) ಸೀಗೇಹಳ್ಳಿ

10) ಅಂಚೆಹಳ್ಳಿ

11) ಕೊಂಡಜ್ಜಿ

12) ಮಣಿಚೆಂಡೂರು

13) ಮಾಳಿನಕೆರೆ

14) ಮುತ್ತಗದ ಹಳ್ಳಿ

15) ಹುಲ್ಲೇಕೆರೆ

ತುರುವೇಕೆರೆಯಲ್ಲಿ ಪ್ರವಾಸಿ ಮಂದಿರ ನಿರ್ಮಾಣ.

582(635)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ತುರುವೇಕೆರೆಯಲ್ಲಿ ಒಂದು ಪ್ರವಾಸಿ ಮಂದಿರ ಇದ್ದು, ಇಲ್ಲಿ ಬರಿ ಎರಡು ರೂಮುಗಳು ಮಾತ್ರ ಇದ್ದು, ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

2) ಮತ್ತೆ ಎರಡು ಕೊಠಡಿ ಹಾಗೂ ಒಂದು ಡೈನಿಂಗ್ ಹಾಲ್ ನಿರ್ಮಾಣ ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1) ಹೌದು

2) ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು, ಅವಶ್ಯವಾದ ಅಂದಾಜುಗಳನ್ನು ಹಾಗೂ ನಕ್ಷೆಗಳನ್ನು ತಯಾರಿಸಲು ಪರಿಶೀಲಿಸಲಾಗುತ್ತಿದೆ.

ತುರುವೆಕೆರೆ ತಾಲ್ಲೂಕು ಸಂಪಿಗೆ ಗ್ರಾಮದಲ್ಲಿ ಬಿ.ಎಂ.ಶ್ರೀ ಭವನ ನಿರ್ಮಾಣ.

583(636)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ)(ತುರುವೇಕೆರೆ): ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?